1ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯ, ನಂಜನಗೂಡು

ಸಿ.ಸಿ.ಸಂಖ್ಯೆಃ 642 ಃ 2014

ಪಿರ್ಯಾದಿ ಃ ಬದನವಾಳು ಪೊಲೀಸರು

ವಿರುದ್ಧ

ಆರೋಪಿ ಃ ಆನಂದ ಉಃ ಮಹೇಶ ಬಿನ್ ಚಿಕ್ಕಮಾದನಾಯ್ಕ,
22 ವರ್ಷ, ಹೆಡತಲೆ ಗ್ರಾಮ, ನಂಜನಗೂಡು ತಾ

## ದೋಷಾರೋಪಣೆ

ಸಂದೀಪ್ ಎ. ನಾಯಿಕ್, 1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರಾದ ನಾವು ಆರೋಪಿತರಾದ ನಿಮ್ಮ ಮೇಲೆ ದೋಷಾರೋಪಿಸುವುದೇನೆಂದರೆಃ-

ದಿಃ 30.10.2013 ರಂದು ರಾತ್ರಿ 7.15 ಗಂಟೆ ಸಮಯದಲ್ಲಿ ಬದನವಾಳು ಪೋಲಿಸ್ ಠಾಣಾ ವ್ಯಾಪ್ತಿಗೆ ಸೇರಿದ ಹೆಡತಲೆ ಗ್ರಾಮದ ಬಸ್ ಸ್ಟ್ಯಾಂಡ್ ಹತ್ತಿರವಿರುವ ರಾಜುರವರ ಮೊಬೈಲ್ ಅಂಗಡಿ ಹತ್ತಿರ ಸಾರ್ವಜನಿಕ ರಸ್ತೆಯಲ್ಲಿ ಚಾಸಾ-1- ರಂಗನಾಯ್ಕರವರು ಆರೋಪಿತರಾದ ನಿಮಗೆ ಕೊಡಬೇಕಾದ ದುಡ್ಡನ್ನು ಕೊಡು ಎಂದು ಕೇಳಿದ್ದಕ್ಕೆ ಆರಸೋಪಿತರಾದ ನೀವು ಚಾಸಾ-1 ರವರನ್ನು ಬೋಳಿ ಮಗನೆ ನಿನಗೆ ಯಾವ ದುಡ್ಡು ಕೊಡೋದು ಎಂದು ಅವಾಚ್ಯ ಶಬ್ದಗಳಿಂದ ಬೈಯ್ದು ಕಲ್ಲಿನಿಂದ ಬಲದ ಹಣೆಗೆ ಹೊಡೆದು ರಕ್ತಗಾಯಮಾಡಿ ನೋವುಂಟುಮಾಡಿದ ಕಾರಣ ಭಾರತ ದಂಡ ಸಂಹಿತೆಯ ಕಲಂ 324 ಶಿಕ್ಷಾರ್ಹವಾದ ಅಪರಾಧವೆಸಗಿರುವಿರೆಂದು ನಿಮ್ಮ ಮೇಲೆ ದೋಷಾರೋಪಿಸಲಾಗಿದೆ.

ಎರಡನೆಯದಾಗಿ ಅದೇ ದಿನ, ಅದೇ ವೇಳೆ ಮತ್ತು ಅದೇ ಸ್ಥಳದಲ್ಲಿ, ಆರೋಪಿತರಾದ ನೀವು ಸಾಕ್ಷಿ-1 ರವರಿಗೆ ಕಾಲಿನಿಂದ ಕೆಳಹೊಟ್ಟೆಯ ಹತ್ತಿರ ಹೊದ್ದು ಸಾಮಾನ್ಯ ಸ್ವರೂಪದ ಗಾಯವನ್ನುಂಟುಮಾಡಿದ ಕಾರಣ ಭಾರತ ದಂಡ ಸಂಹಿತೆಯ ಕಲಂ 323 ಶಿಕ್ಷಾರ್ಹವಾದ ಅಪರಾಧವೆಸಗಿರುವಿರೆಂದು ನಿಮ್ಮ ಮೇಲೆ ದೋಷಾರೋಪಿಸಲಾಗಿದೆ.

ಮೇಲ್ಕಂಡ ಆಪಾದನೆಗೆ ಆರೋಪಿಗಳಾದ ನಿಮ್ಮನ್ನು ನ್ಯಾಯಾಲಯದ ಅಧಿವಿಚಾರಣೆಯನ್ನು ಎದುರಿಸಬೇಕೆಂದು ಆದೇಶಿಸುತ್ತೇನೆ.

ದಿನಾಂಕಃ 10.7.2017 1ನೇ ಹೆಚ್ಚುವರಿ ಸಿ.ಜೆ. ಮತ್ತು ಜೆ.ಎಂ.ಎಫ್.ಸಿ.
ಸ್ಥಳ ಃ ನಂಜನಗೂಡು ನಂಜನಗೂಡು